ರಸ್ತೆಗಳ ದುರಸ್ತಿ

323 (679) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (**ಮುದ್ದೇಬಿಹಾಳ**) ಮಾನ್ಯ ಜಲಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ರಾಜ್ಯದಲ್ಲಿರುವ ಮುಖ್ಯ ರಸ್ತೆಗಳು ಜಲಸಂಪನ್ಮೂಲ ಇಲಾಖೆಗೆ ಸೇರಿವೆಯೇ;

(ಆ) ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಮುಖ್ಯ ರಸ್ತೆಗಳು ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಗೆ ಸೇರಿದ್ದು, ಈ ರಸ್ತೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

(ಇ) ಈ ರಸ್ತೆಗಳು ತುಂಬಾ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ಕ್ರಮ ತೆಗೆದುಕೊಂಡಿರುತ್ತದೆ? (ಸಂಪೂರ್ಣ ಮಾಹಿತಿ ನೀಡುವುದು);

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

(ಅ) ರಾಜ್ಯದಲ್ಲಿ ಜಲಾಶಯಗಳಿಗೆ ಸಂಪರ್ಕ ಹೊಂದುವ ಮುಖ್ಯ ರಸ್ತೆಗಳು ಜಲಸಂಪನ್ಮೂಲ ಇಲಾಖೆಗೆ ಸೇರಿರುತ್ತವೆ.

ಆಲಮಟ್ಟಿ- ಬಾಗಲಕೋಟೆ ರಸ್ತೆ

ಆಲಮಟ್ಟಿ-ಮುದ್ದೇಬಿಹಾಳ ರಸ್ತೆ

ಮುದ್ದೇಬಿಹಾಳ-ನಾರಾಯಣಪೂರ ರಸ್ತೆ

ಮುದ್ದೇಬಿಹಾಳ-ತಂಗಡಗಿ

ನಾರಾಯಣಪೂರ-ಹುಣಸಗಿ-ಕೆಂಭಾವಿ-ಮಲ್ಲಾರಸ್ತೆ

ನಾರಾಯಣಪೂರ-ಲಿಂಗಸಗೂರು ರಸ್ತೆ

ಲಿಂಗಸಗೂರು-ಚಿತ್ತಾಪೂರ ರಸ್ತೆ

(ಆ) ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನಡಿಯಲ್ಲಿ ಈ ಕೆಳಗಿನ ಮುಖ್ಯ ರಸ್ತೆಗಳು ಹಾಗೂ ಕಳೆದ 3 ವರ್ಷದಲ್ಲಿ ದುರಸ್ತಿಗಾಗಿ ಬಿಡುಗಡೆಯಾದ ಹಣ.

ಆಲಮಟ್ಟಿ- ಮುದ್ದೇಬಿಹಾಳ ರಸ್ತೆ --31.00 ಲಕ್ಷ

ಮುದ್ದೇಬಿಹಾಳ– ನಾರಾಯಣಪೂರ ರಸ್ತೆ – 20.00 ಲಕ್ಷ

ಮುದ್ದೇಬಿಹಾಳ–ತಂಗಡಗಿ ರಸ್ತೆ – 30.00 ಲಕ್ಷ

(ಇ) ಗಮನಕ್ಕೆ ಬಂದಿದೆ.

(ಈ) ಪ್ರಸಕ್ತ ಸಾಲಿನಲ್ಲಿ ಮುದ್ದೇಬಿಹಾಳ ತಾಲೂಕಿನ ರಸ್ತೆಗಳ ದುರಸ್ತಿಗಾಗಿ (ಚಿಪ್ ಕಾರ್ಪೆಟಿಂಗ್) ಅನುದಾನ ಕಲ್ಪಿಸಲಾಗಿದ್ದು, ಮುದ್ದೇಬಿಹಾಳ– ತಂಗಡಗಿ ರಸ್ತೆಯ ದುರಸ್ತಿ ಕೈಗೆತ್ತಿಕೊಳ್ಳುವ ಸಲುವಾಗಿ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿ ಇರುತ್ತದೆ.

ನಂತರ ಬಾಕಿ ಎರಡು ರಸ್ತೆಗಳ ಚಿಪ್ ಕಾರ್ಪೆಟಿಂಗ್ ಮಾಡಿ ಸಂಚಾರಕ್ಕೆ ಉಪಯುಕ್ತಗೊಳಿಸಲು ಅಂದಾಜು ಪತ್ರಿಕೆಗಳನ್ನು ತಯಾರಿಸಲಾಗಿದ್ದು, ಅಧ್ಯಕ್ಷತೆಯ ಮೇರೆಗೆ ಟೆಂಡರ್ ಆಧಾರದ ಮೇಲೆ ಕೈಗೆತ್ತಿಕೊಳ್ಳಲಾಗುವುದು. ದುರಸ್ತಿ ನಂತರ ಲೋಕೋಪಯೋಗಿ ಹಾಗೂ ಕೆ.ಆರ್.ಡಿ.ಸಿ.ಎಲ್. ಇಲಾಖೆಗಳಿಗೆ ಈ ರಸ್ತೆಗಳನ್ನು ಮೇಲ್ದರ್ಜೆಗೊಳಿಸುವ ಸಲುವಾಗಿ ಹಸ್ತಾಂತರಿಸಲಾಗುವುದು.

ಕೃಷಿ ಜಮೀನು ಭೂಸ್ವಾಧೀನ

324 (680) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:–

(ಅ) ಉತ್ತರ ಕರ್ನಾಟಕ ಭಾಗದಲ್ಲಿ ಕೈಗಾರಿಕಾ ಪ್ರದೇಶಾಭಿವೃದ್ಧಿ ನಿಗಮದಿಂದ ಕೈಗಾರಿಕೆಗಳ ಉದ್ದೇಶಕ್ಕಾಗಿ ಕೃಷಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೇ;

(ಆ) ಸ್ವಾಧೀನಪಡಿಸಿಕೊಂಡಿದ್ದಲ್ಲಿ ವಿಸ್ತೀರ್ಣ ಎಷ್ಟು;

(ಇ) ಭೂಸ್ವಾಧೀನ ಪಡಿಸಿಕೊಂಡಿರುವ ಜಮೀನಿನಲ್ಲಿ ಕೈಗಾರಿಕೆಗಳ ಅಭಿವೃದ್ಧಿಗಾಗಿ ಯಾವ ಕ್ರಮ ತೆಗೆದುಕೊಳ್ಳಲಾಗಿದೆ;

(ಈ) ಹಾಗಿದ್ದಲ್ಲಿ, ಕೈಗಾರಿಕೆಗಳಿಗೆ ಈ ಜಮೀನನ್ನು ನೀಡಲಾಗುತ್ತಿದೆಯೇ;

(ಉ) ಭೂಸ್ವಾಧೀನಪಡಿಸಿಕೊಂಡಿರುವ ಕೃಷಿಕರಿಗೆ ಪರಿಹಾರ ಧನ ವಿತರಿಸಲಾಗಿದೆಯೇ?

ಶ್ರೀ ಮುರುಗೇಶ್ ಆರ್ ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

(ಅ) ಹೌದು, ಕೆ.ಐ.ಎ.ಡಿ.ಬಿ. ವತಿಯಿಂದ ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಕೈಗಾರಿಕಾ ಪ್ರದೇಶ ಮತ್ತು ಏಕ ಘಟಕ ಸಂಕೀರ್ಣಗಳಿಗಾಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.